ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 356
ಸದಸ್ಯರ ಹೆಸರು : ಶ್ರೀ ನಸೀರ್ ಅಹ್ಮದ್.
(ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : 15-09-2021
ಉತ್ತರಿಸುವ ಸಚಿವರು : ಕಂದಾಯ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಬೆಂಗಳೂರು ನಗರ ಜಿಲ್ಲೆ, ಗ್ರಾಮಾಂತರ ಜಿಲ್ಲೆ ಹಾಗೂ ರಾಜ್ಯ ಗ್ರಾಮೀಣ ಪ್ರದೇಶಗಳಲ್ಲಿ ಸರ್ಕಾರಿ ಜಾಗದಲ್ಲಿ ಮನೆ ಕಟ್ಟಿಕೊಂಡವರಿಗೆ ಅಕ್ರಮ-ಸಕ್ರಮ ಯೋಜನೆಯಡಿಯಲ್ಲಿ ಸಕ್ರಮಗೊಳಿಸಲು ಸರ್ಕಾರ ಜಾರಿಗೊಳಿಸಿರುವ ಮಾನದಂಡವೇನು; ಇದಕ್ಕೆ ಕಾಲಮಿತಿ ನೀಡಲಾಗಿದೆಯೇ;	ಗ್ರಾಮಾಂತರ ಮತ್ತು ನಗರ ಪ್ರದೇಶದಲ್ಲಿ ಸರ್ಕಾರಿ ಜಮೀನುಗಳಲ್ಲಿ ಅನಧಿಕೃತವಾಗಿ ನಿರ್ಮಿಸಿರುವ ವಾಸದ ಮನೆಗಳನ್ನು ಸಕ್ರಮಗೊಳಿಸುವ ಸಲುವಾಗಿ ಕ್ರಮವಾಗಿ ಕರ್ನಾಟಕ ಭೂ ಕಂದಾಯ ಕಾಯ್ದೆ, 1964 ರ ಕಲಂ 94ಸಿ ಮತ್ತು ಕಲಂ 94ಸಿಸಿ ರಡಿಯಲ್ಲಿ ಅರ್ಜಿ ಸಲ್ಲಿಸಲು ದಿನಾಂಕ: 31.03.2022 ರವರೆಗೆ ಕಾಲಾವಕಾಶ ಕಲ್ಪಿಸಲಾಗಿದೆ. ಸ್ವೀಕೃತವಾದ ಅರ್ಜಿಗಳನ್ನು ನಿಯಮಾನುಸಾರ ಪರಿಶೀಲಿಸಿ ಸದರಿ ದಿನಾಂಕದಿಂದ ಒಂದು ವರ್ಷದ ಅವಧಿಯಲ್ಲಿ ಇತ್ಯರ್ಥಪಡಿಸಲು ಅವಕಾಶವಿದೆ. ಗ್ರಾಮಾಂತರ ಪ್ರದೇಶದ ಸರ್ಕಾರಿ ಜಮೀನುಗಳಲ್ಲಿ ಅನಧಿಕೃತವಾಗಿ ನಿರ್ಮಿಸಿರುವ 30X40, 40X60 ಮತ್ತು 50X80 ಅಡಿ ಅಳತೆಯ ವಾಸದ ಮನೆಗಳನ್ನು ಸಕ್ರಮಗೊಳಿಸುವ ಸಲುವಾಗಿ ಕರ್ನಾಟಕ ಭೂ ಕಂದಾಯ ಕಾಯ್ದೆ, 1964 ರ ಕಲಂ 94ಸಿ ರಡಿಯಲ್ಲಿ ಅವಕಾಶ ಕಲ್ಪಿಸಲಾಗಿದೆ. ನಗರ ಪ್ರದೇಶದ ಸರ್ಕಾರಿ ಜಮೀನುಗಳಲ್ಲಿ ಅನಧಿಕೃತವಾಗಿ ನಿರ್ಮಿಸಿರುವ 20X30 ಅಡಿ ಅಳತೆಯ ಹಾಗೂ ಬಿಬಿಎಂಪಿ, ನಗರ ಕಾರ್ಪೊರೇಷನ್, ಸಿಎಂಸಿ, ಟಿಎಂಸಿ ಮತ್ತು ಪಟ್ಟಣ ಪಂಚಾಯತ್ ವ್ಯಾಪ್ತಿಯಿಂದ ನಿರ್ದಿಷ್ಟಪಡಿಸಿದ ಅಂತರದೊಳಗಿನ ಬಫರ್ ಜೋನ್ ಪ್ರದೇಶಗಳಲ್ಲಿ ನಿರ್ಮಿಸಿರುವ 30X40 ವಿಸ್ತೀರ್ಣದ ವಾಸದ ಮನೆಗಳನ್ನು ಸಕ್ರಮಗೊಳಿಸಲು ಕರ್ನಾಟಕ ಭೂ ಕಂದಾಯ ಕಾಯ್ದೆ, 1964 ರ ಕಲಂ 94ಸಿಸಿ ರಡಿಯಲ್ಲಿ ಅವಕಾಶ ಕಲ್ಪಿಸಲಾಗಿದೆ

ಆ)	ಲ್ಯಾಂಡ್ ಡೆವಲಪರ್ಸ್‌ಗಳು ಬಡಾವಣೆಗಳನ್ನು ನಿರ್ಮಿಸುವಾಗ ಸರ್ಕಾರಿ ಗೋಮಾಳವನ್ನು ಒತ್ತುವರಿ ಮಾಡಿ, ಎಲ್ಲಾ ವರ್ಗದ ಜನರಿಗೆ ಮಾರಾಟವನ್ನು ಸಬ್-ರಿಜಿಸ್ಟ್ರಾರ್ ರವರ ಕಛೇರಿಗಳಲ್ಲಿಯೇ ಕಾನೂನು ರೀತ್ಯಾ ನೋಂದಣಿ ಮಾಡಿಕೊಟ್ಟಿದ್ದು, ಇಲ್ಲಿ ಮನೆಗಳನ್ನು ಕಟ್ಟಬೇಕಾದ ಸಮಯದಲ್ಲಿ ಸಂಬಂಧಪಟ್ಟ ಕಛೇರಿಗಳಿಂದ ಖಾತೆ, ಇನ್ನಿತರೆ ಸವಲತ್ತುಗಳನ್ನು ಪಡೆದು ಸಾಲಗಳನ್ನು ತೆಗೆದುಕೊಂಡು ಸುಮಾರು ವರ್ಷಗಳಿಂದ ಜೀವನ ಕಟ್ಟಿಕೊಂಡವರಿಗೆ ಅವರುಗಳ ಹೆಸರಿಗೆ ಸಕ್ರಮಗೊಳಿಸಲು ಸರ್ಕಾರ ಯಾವ ತೀರ್ಮಾನ ಕೈಗೊಳ್ಳಲಾಗಿದೆ;	ಇಂತಹ ಪ್ರಸ್ತಾವನೆಗಳು ಸರ್ಕಾರದ ಮುಂದೆ ಇರುವುದಿಲ್ಲ.
ಇ)	ಪ್ರದೇಶವಾರು ಯಾವ ಯಾವ ಅಳತೆ ಕಟ್ಟಿಕೊಂಡಿರುವ ಮನೆಗಳನ್ನು ಸಕ್ರಮಗೊಳಿಸುವ ಬಗ್ಗೆ ಬಂದಿರುವ ಅರ್ಜಿಗಳೆಷ್ಟು; ವಿಲೇವಾರಿ ಮಾಡಿಕೊಂಡಿರುವ ಎಷ್ಟು; ಅನರ್ಹವಾದ ಅರ್ಜಿಗಳ ಬಗ್ಗೆ, ಸರ್ಕಾರ ಯಾವ ತೀರ್ಮಾನ ಕೈಗೊಳ್ಳಲಿದೆ; ಇವುಗಳಿಗೆ ಸಹಾನುಭೂತಿಯಿಂದ ಮುಂದಿನ ದಿನಗಳಲ್ಲಿ ಸಕ್ರಮಗೊಳಿಸಲಾಗುವುದೇ;	ಕಲಂ 94 ಸಿ ಮತ್ತು ಕಲಂ 94ಸಿಸಿ ರಡಿಯಲ್ಲಿ ಸ್ವೀಕರಿಸಿದ ಅರ್ಜಿಗಳ ಜಿಲ್ಲಾವಾರು ವಿವರಗಳನ್ನು **ಅನುಬಂಧ**ದಲ್ಲಿ ಒದಗಿಸಲಾಗಿದೆ. ಅನರ್ಹವಾದ ಅರ್ಜಿಗಳನ್ನು ಸಕ್ರಮಗೊಳಿಸುವ ಕುರಿತು ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.
ಈ)	ನಗರ ಪ್ರದೇಶ, ಗ್ರಾಮಾಂತರ ಜಿಲ್ಲೆ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಬಡ/ಮಧ್ಯಮ ವರ್ಗದವರು 2010ಕ್ಕೂ ಹಿಂದಿನ ವರ್ಷಗಳಲ್ಲಿ ಮನೆ ಕಟ್ಟಿಕೊಂಡು ವಾಸವಾಗಿದ್ದರೆ, ಅಂತಹ ಮನೆಗಳನ್ನು ಸಕ್ರಮಗೊಳಿಸಲು ತೀರ್ಮಾನ ಕೈಗೊಳ್ಳಲಾಗಿದೆಯೇ; ಇಲ್ಲವಾದಲ್ಲಿ ಈ ಬಗ್ಗೆ ಮುಂದಿನ ದಿನಗಳಲ್ಲಿ ಅಂತವರ ಮನೆಗಳನ್ನು ಸಕ್ರಮಗೊಳಿಸುವ ಬಗ್ಗೆ ಸರ್ಕಾರದ ನಿಲುವೇನು? (ಸಂಪೂರ್ಣ ವಿವರ ನೀಡುವುದು)	ದಿನಾಂಕ: 01.01.2015 ರ ಪೂರ್ವದಲ್ಲಿ ಗ್ರಾಮಾಂತರ ಮತ್ತು ನಗರ ಪ್ರದೇಶದಲ್ಲಿ ಸರ್ಕಾರಿ ಜಮೀನುಗಳಲ್ಲಿ ಅನಧಿಕೃತವಾಗಿ ನಿರ್ಮಿಸಿರುವ ವಾಸದ ಮನೆಗಳನ್ನು ಸಕ್ರಮಗೊಳಿಸುವ ಸಲುವಾಗಿ ಕ್ರಮವಾಗಿ ಕರ್ನಾಟಕ ಭೂ ಕಂದಾಯ ಕಾಯ್ದೆ, 1964 ರ ಕಲಂ 94ಸಿ ಮತ್ತು ಕಲಂ 94ಸಿಸಿ ರಡಿಯಲ್ಲಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

ಸಂಖ್ಯೆ: ಆರ್‌ಡಿ 133 ಎಲ್‌ಜಿಕ್ಯೂ 2021 (ಇ)

(ಆರ್. ಅಶೋಕ)
ಕಂದಾಯ ಸಚಿವರು.

ಅನುಬಂಧ

ಕಲಂ 94ಸಿ (ಗ್ರಾಮೀಣ) ರಡಿಯಲ್ಲಿ ಅರ್ಜಿಗಳನ್ನು ಸ್ವೀಕರಿಸಿದ ಮತ್ತು ಇತ್ಯರ್ಥಪಡಿಸಿದ ವಿವರ

ಕ್ರಸಂ.	ಜಿಲ್ಲೆ	ಸ್ವೀಕೃತವಾಗಿರುವ ಅರ್ಜಿಗಳ ಸಂಖ್ಯೆ	ಮಂಜೂರಾತಿ ಪ್ರಕರಣಗಳ ಸಂಖ್ಯೆ	ತಿರಸ್ಕೃತ ಪ್ರಕರಣಗಳ ಸಂಖ್ಯೆ	ಒಟ್ಟು ವಿಲೇವಾರಿ (4+5)	ಮಂಜೂರಾದ ಪ್ರಕರಣಗಳಲ್ಲಿ ಹಕ್ಕುಪತ್ರ ನೀಡಿದ ಸಂಖ್ಯೆ	ಮಂಜೂರಾದ ಪ್ರಕರಣಗಳಲ್ಲಿ ಹಕ್ಕುಪತ್ರ ನೀಡಲು ಬಾಕಿ (4-7)	ಬಾಕಿ ಅರ್ಜಿಗಳ ಸಂಖ್ಯೆ (3-6)
1	2	3	4	5	6	7	8	9
1	ಬೆಂಗಳೂರು (ನ)	3470	925	1596	2521	208	717	949
2	ಬೆಂಗಳೂರು (ಗ್ರಾ)	15429	2041	13380	15421	1966	75	8
3	ಕೋಲಾರ	5637	1316	3871	5187	570	746	450
4	ಚಿಕ್ಕಬಳ್ಳಾಪುರ	8537	2904	5314	8218	2677	227	319
5	ರಾಮನಗರ	5489	1258	3834	5092	1171	87	397
6	ಶಿವಮೊಗ್ಗ	76449	18827	56086	74913	18295	532	1536
7	ಚಾಮರಾಜನಗರ	1208	260	838	1098	260	0	110
8	ಉಡುಪಿ	33230	8308	23609	31917	7541	767	1313
9	ಹಾಸನ	34812	7588	19171	26759	6468	1120	8053
10	ಉತ್ತರ ಕನ್ನಡ	9651	2508	7143	9651	2508	0	0
11	ಮಂಡ್ಯ	3971	121	3683	3804	106	15	167
12	ದಕ್ಷಿಣ ಕನ್ನಡ	107245	49206	57350	106556	48695	511	689
13	ಮೈಸೂರು	6584	1139	4796	5935	1016	123	649
14	ಚಿಕ್ಕಮಗಳೂರು	52447	18437	27626	46063	17024	1413	6384
15	ಕೊಡಗು	20174	6542	10923	17465	6542	0	2709
16	ತುಮಕೂರು	11931	3124	8807	11931	3124	0	0
17	ಚಿತ್ರದುರ್ಗ	6621	2402	3704	6106	779	1623	515
18	ಧಾರವಾಡ	14542	1757	12636	14393	1757	0	149
19	ಹಾವೇರಿ	12515	602	11880	12482	208	394	33
20	ಕೊಪ್ಪಳ	15089	676	14413	15089	676	0	0
21	ರಾಯಚೂರು	10034	2436	7598	10034	2002	434	0
22	ಬಳ್ಳಾರಿ	25305	5887	19418	25305	5887	0	0
23	ಬೆಳಗಾವಿ	49402	1216	47208	48424	1004	212	978
24	ಗದಗ	1618	36	1582	1618	36	0	0
25	ಬೀದರ್	18797	5155	13642	18797	5155	0	0
26	ಕಲಬುರಗಿ	13759	3926	7911	11837	2586	1340	1922
27	ದಾವಣಗೆರೆ	12837	3561	8648	12209	3322	239	628
28	ವಿಜಯಪುರ	22664	276	22388	22664	276	0	0
29	ಬಾಗಲಕೋಟೆ	14583	4563	9922	14485	4563	0	98
30	ಯಾದಗಿರಿ	6105	240	5865	6105	240	0	0
	ಒಟ್ಟು	620135	157237	434842	592079	146662	10575	28056

ಕಲಂ 94ಸಿಸಿ (ನಗರ) ರಡಿಯಲ್ಲಿ ಅರ್ಜಿಗಳನ್ನು ಸ್ವೀಕರಿಸಿದ ಮತ್ತು ಇತ್ಯರ್ಥಪಡಿಸಿದ ವಿವರ

ಕ್ರಸಂ.	ಜಿಲ್ಲೆ	ಸ್ವೀಕೃತವಾಗಿರುವ ಅರ್ಜಿಗಳ ಸಂಖ್ಯೆ	ಮಂಜೂರಾತಿ ಪ್ರಕರಣಗಳ ಸಂಖ್ಯೆ	ತಿರಸ್ಕೃತ ಪ್ರಕರಣಗಳ ಸಂಖ್ಯೆ	ಒಟ್ಟು ವಿಲೇವಾರಿ (4+5)	ಮಂಜೂರಾದ ಪ್ರಕರಣಗಳಲ್ಲಿ ಹಕ್ಕುಪತ್ರ ನೀಡಿದ ಸಂಖ್ಯೆ	ಮಂಜೂರಾದ ಪ್ರಕರಣಗಳಲ್ಲಿ ಹಕ್ಕುಪತ್ರ ನೀಡಲು ಬಾಕಿ (4-7)	ಬಾಕಿ ಅರ್ಜಿಗಳ ಸಂಖ್ಯೆ (3-6)
1	2	3	4	5	6	7	8	9
1	ಬೆಂಗಳೂರು (ನ)	53748	12385	32981	45366	5812	6573	8382
2	ಬೆಂಗಳೂರು (ಗ್ರಾ)	11592	3314	7845	11159	2747	567	433
3	ಕೋಲಾರ	2437	749	1483	2232	328	421	205
4	ಚಿಕ್ಕಬಳ್ಳಾಪುರ	2050	245	1805	2050	245	0	0
5	ರಾಮನಗರ	1110	204	906	1110	204	0	0
6	ಶಿವಮೊಗ್ಗ	21343	5334	15652	20986	5334	0	357
7	ಚಾಮರಾಜನಗರ	66	0	53	53	0	0	13
8	ಉಡುಪಿ	9033	2330	6255	8585	2069	261	448
9	ಹಾಸನ	1358	142	951	1093	142	0	265
10	ಉತ್ತರ ಕನ್ನಡ	5368	1520	3771	5291	1520	0	77
11	ಮಂಡ್ಯ	2171	9	2162	2171	9	0	0
12	ದಕ್ಷಿಣ ಕನ್ನಡ	40356	25171	14090	39261	24922	249	1095
13	ಮೈಸೂರು	804	63	724	787	63	0	17
14	ಚಿಕ್ಕಮಗಳೂರು	1952	198	1264	1462	198	0	490
15	ಕೊಡಗು	2089	906	904	1810	906	0	279
16	ತುಮಕೂರು	4870	1554	3316	4870	1554	0	0
17	ಚಿತ್ರದುರ್ಗ	5424	1156	3874	5030	438	718	394
18	ಧಾರವಾಡ	2393	103	2290	2393	103	0	0
19	ಹಾವೇರಿ	793	140	653	793	140	0	0
20	ಕೊಪ್ಪಳ	336	243	93	336	243	0	0
21	ರಾಯಚೂರು	1473	186	1287	1473	186	0	0
22	ಬಳ್ಳಾರಿ	32750	6403	26347	32750	6403	0	0
23	ಬೆಳಗಾವಿ	11813	0	11714	11714	0	0	99
24	ಗದಗ	1281	0	1281	1281	0	0	0
25	ಬೀದರ್	697	11	686	697	1	10	0
26	ಕಲಬುರಗಿ	1287	34	1253	1287	0	34	0
27	ದಾವಣಗೆರೆ	1297	0	1297	1297	0	0	0
28	ವಿಜಯಪುರ	1758	16	1742	1758	16	0	0
29	ಬಾಗಲಕೋಟೆ	13295	2375	10868	13243	2375	0	52
30	ಯಾದಗಿರಿ	878	90	788	878	90	0	0
	ಒಟ್ಟು	235822	64881	158335	223216	56048	8833	12606